# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 327
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು: ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 06.03.2020
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಾಸನದಲ್ಲಿ ವೃದ್ಧಾಶ್ರಮ, ಅನಾಥ ಮಕ್ಕಳ ಆಶ್ರಮ ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳೆಷ್ಟು: ಇಲ್ಲಿ ಎಷ್ಟು ಜನರನ್ನು ಪೋಷಿಸಲಾಗುತ್ತಿದೆ: ಇಲ್ಲಿರುವ ಸೌಲಭ್ಯಗಳೇನು: ಕೇಂದ್ರವಾರು ಮಾಹಿತಿ ನೀಡುವುದು: | ಹಾಸನ ಜಿಲ್ಲೆಯಲ್ಲಿ ಒಟ್ಟು 4 ವೃದ್ಧಾಶ್ರಮಗಳು ನಡೆಯುತ್ತಿದ್ದು, (ರಾಜ್ಯ ಅನುದಾನದಡಿ 3 ಕೇಂದ್ರ ಅನುದಾನದಡಿ 1 ವೃದ್ಧಾಶ್ರಮ) ವಿವರವಾದ ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ<br><br>ಹಾಸನ ಜಿಲ್ಲೆಯಲ್ಲಿ 04 ನಿರ್ಗತಿಕ ಮಕ್ಕಳ ಕುಟೀರಗಳಿವೆ. ಆದರೆ 2 ಕುಟೀರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಸ್ನೇಹಾಲಯ ಅಕ್ಸೇಲಿಯಂ ವಿಕಾಸ ಕೇಂದ್ರ ಹಾಸನ ಮತ್ತು ಷರೀಫ್ ಚಾರಿಟೀಸ್ ಹಾಸನ. ಸದರಿ ಕುಟೀರಗಳಲ್ಲಿ ಒಟ್ಟು 50 ಮಕ್ಕಳನ್ನು ಪೋಷಿಸಲಾಗುತ್ತಿದೆ. ಕುಟೀರಗಳು ಸ್ವಂತ ಕಟ್ಟಡವಾಗಿದ್ದು, ಊಟ, ಬಟ್ಟೆ, ವಸತಿ, ವೈದ್ಯಕೀಯ ಮತ್ತು ಶಿಕ್ಷಣ ಸೌಲಭ್ಯ ಒದಗಿಸಲಾಗಿದೆ. ಕೇಂದ್ರವಾರು ವಿವರಗಳನ್ನು ಅನುಬಂಧ–1 ರಲ್ಲಿನ ಕ್ರಮ ಸಂಖ್ಯೆ–2 ರಲ್ಲಿ ನೀಡಲಾಗಿದೆ.<br><br>ಹಾಸನ ಜಿಲ್ಲೆಯಲ್ಲಿ ಒಂದು ಮಕ್ಕಳ ಸಹಾಯವಾಣಿ ಕೇಂದ್ರ ಇದ್ದು, ವಿವರಗಳನ್ನು ಅನುಬಂಧ–1 ರಲ್ಲಿನ ಕ್ರಮ ಸಂಖ್ಯೆ–3 ರಲ್ಲಿ ನೀಡಲಾಗಿದೆ. |
| ಆ | ಹಾಸನದಲ್ಲಿ ನಡೆಯುತ್ತಿರುವ ವೃದ್ಧಾಶ್ರಮ, ಅನಾಥ ಮಕ್ಕಳ ಆಶ್ರಮ ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳಲ್ಲಿ ಯಾವ ಯಾವ ಸಂಸ್ಥೆಗಳು ಯಾವ ಯಾವ ಸೇವೆಗಳನ್ನು ಎಷ್ಟು ವರ್ಷಗಳಿಂದ ಮಾಡುತ್ತಿವೆ: ಅವುಗಳು ಯಾವ ಹಂತದಲ್ಲಿವೆ. | **ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.** |
| ಇ | ಸರ್ಕಾರದಿಂದ ಅವುಗಳಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ ಹಾಗೂ ಎಷ್ಟು ವರ್ಷಗಳಿಂದ ಬಿಡುಗಡೆ, ಮಾಡಲಾಗುತ್ತಿದೆ. | ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. |

**ಸಂ:ಮಮಇ 21 ಸ್ತ್ರೀಮರ 2020**

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

# ಅನುಬಂಧ-1

## 1. ವೃದ್ಧಾಶ್ರಮಗಳ ವಿವರ

| ಕ್ರ.ಸಂ | ಸಂಸ್ಥೆಯ ಹೆಸರು | ವೃದ್ಧಾಶ್ರಮದ ಹೆಸರು | ಯಾವ ವರ್ಷದಿಂದ ನಡೆಯುತ್ತಿದೆ | ಫಲಾನುಭವಿಗಳ ಸಂಖ್ಯೆ | ಕೇಂದ್ರದಲ್ಲಿನ ಸೌಲಭ್ಯಗಳು | ಅನುದಾನದ ವಿವರ | ಷರಾ |
|---|---|---|---|---|---|---|---|
| 1 | ವಿದ್ಯಾರಣ್ಯ (ರಿ) ಮಂಡೂರು, ಬೆಂಗಳೂರು | ಗಾಂಧಿ ವೃದ್ಧಾಶ್ರಮ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ | 2005-06 | 25 | ಸಿಬ್ಬಂದಿ ಗೌರವಧನ, ಕಟ್ಟಡ ಬಾಡಿಗೆ, ಊಟದ ವೆಚ್ಚ, ಔಷದೊಪಚಾರ, ಎಣ್ಣೆ ಸೋಪು, ವಿದ್ಯುತ್, ನೀರಿನ ವೆಚ್ಚ, ಮನೋರಂಜನಾ ವೆಚ್ಚ ಹಾಗೂ ಇತರೆ ವೆಚ್ಚಗಳು | ರೂ.20.00 ಲಕ್ಷಗಳು | ಕೇಂದ್ರ ಸರ್ಕಾರದ ಅನುದಾನದಡಿ ನಡೆಯುತ್ತಿದೆ. |
| 2 | ಕಾಮಧೇನು ಸಹಕಾರಿ ವಿದ್ಯಾಶ್ರಮ ನಿಯಮಿತ, ಹಾಸನ | ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನಹಳ್ಳಿ, ಹಾಸನ ಜಿಲ್ಲೆ | 2007-08 | 25 | ಸಿಬ್ಬಂದಿ ಗೌರವಧನ, ಕಟ್ಟಡ ಬಾಡಿಗೆ, ಊಟದ ವೆಚ್ಚ, ಔಷದೊಪಚಾರ, ಎಣ್ಣೆ ಸೋಪು, ವಿದ್ಯುತ್, ನೀರಿನ ವೆಚ್ಚ, ಮನೋರಂಜನಾ ವೆಚ್ಚ ಹಾಗೂ ಇತರೆ ವೆಚ್ಚಗಳು | ರೂ.08.00 ಲಕ್ಷಗಳು | ರಾಜ್ಯ ಸರ್ಕಾರದ ಅನುದಾನದಡಿ ನಡೆಯುತ್ತಿದೆ. |
| 3 | ಶ್ವೇತ ವಿದ್ಯಾಸಂಸ್ಥೆ (ರಿ), ದಾಸರಕೊಪ್ಪಲು, ಹಾಸನ | ಶ್ವೇತ ವಿದ್ಯಾಸಂಸ್ಥೆ (ರಿ), ವೃದ್ಧಾಶ್ರಮ, ಹಾಸನ ಉಪ ವಿಭಾಗ ದಾಸರಕೊಪ್ಪಲು, ಹಾಸನ | 2019-20 | 25 | ಸಿಬ್ಬಂದಿ ಗೌರವಧನ, ಕಟ್ಟಡ ಬಾಡಿಗೆ, ಊಟದ ವೆಚ್ಚ, ಔಷದೊಫಚಾರ, ಎಣ್ಣೆ ಸೋಪು, ವಿದ್ಯುತ್, ನೀರಿನ ವೆಚ್ಚ, ಮನೋರಂಜನಾ ವೆಚ್ಚ ಹಾಗೂ ಇತರೆ ವೆಚ್ಚಗಳು | ಸರ್ಕಾರದ ಆದೇಶ ಸಂ:ಮಮಇ/118/ಪಿಹೆಚ್‌ಪಿ/2019, ಬೆಂಗಳೂರು ದಿನಾಂಕ;06.02.2020 ಸದರಿ ಸಂಸ್ಥೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ | ರಾಜ್ಯ ಸರ್ಕಾರದ ಅನುದಾನದಡಿ ನಡೆಯುತ್ತಿದೆ. |
| 4 | ಮಧುಶ್ರೀ ಮಹಿಳಾ ಸಮಾಜ (ರಿ), ಅರಕಲಗೂಡು, ಹಾಸನ | ಮಧುಶ್ರೀ ಮಹಿಳಾ ಸಮಾಜ (ರಿ), ವೃದ್ಧಾಶ್ರಮ, ಸಕಲೇಶಪುರ ಉಪ ವಿಭಾಗ, ಅರಕಲಗೂಡು, ಹಾಸನ | 2019-20 | 25 | ಸಿಬ್ಬಂದಿ ಗೌರವಧನ, ಕಟ್ಟಡ ಬಾಡಿಗೆ, ಊಟದ ವೆಚ್ಚ, ಔಷದೊಫಚಾರ, ಎಣ್ಣೆ ಸೋಪು, ವಿದ್ಯುತ್, ನೀರಿನ ವೆಚ್ಚ, ಮನೋರಂಜನಾ ವೆಚ್ಚ ಹಾಗೂ ಇತರೆ ವೆಚ್ಚಗಳು | ಸರ್ಕಾರದ ಆದೇಶ ಸಂ:ಮಮಇ/118/ಪಿಹೆಚ್‌ಪಿ/2019, ಬೆಂಗಳೂರು ದಿನಾಂಕ;06.02.2020 ಸದರಿ ಸಂಸ್ಥೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ | ರಾಜ್ಯ ಸರ್ಕಾರದ ಅನುದಾನದಡಿ ನಡೆಯುತ್ತಿದೆ. |

| | | | | | | | |
|---|---|---|---|---|---|---|---|
| **2. ನಿರ್ಗತಿಕ ಮಕ್ಕಳ ಕುಟೀರ** | | | | | | | |
| 1 | ಸ್ನೇಹಾಲಯ, ಅಕ್ಸೇಲಿಯಂ ವಿಕಾಸ ಕೇಂದ್ರ, ಹಾಸನ | 2 | 2011-12ನೇ ಸಾಲಿನಿಂದ | 50 | ಕುಟೀರಗಳು ಸ್ವಂತ ಕಟ್ಟಡವಾಗಿದ್ದು, ಊಟ, ಬಟ್ಟೆ, ವಸತಿ, ವೈದ್ಯಕೀಯ ಮತ್ತು ಶಿಕ್ಷಣ ಸೌಲಭ್ಯ ಒದಗಿಸಲಾಗಿದೆ. | ರೂ.5.40 ಲಕ್ಷಗಳು (2019-2020) | ರಾಜ್ಯ ಸರ್ಕಾರದ ಅನುದಾನ 90% ಮತ್ತು ಸಂಸ್ಥೆ 10% ರಡಿ ನಡೆಯುತ್ತಿದೆ. |
| 2 | ಷರೀಫ್ ಚಾರಿಟೀಸ್, ಹಾಸನ | 2 | – | 0 | ಮೂಲಭೂತ ಸೌಕರ್ಯಗಳಿಲ್ಲದೇ ಇರುವುದರಿಂದ ರದ್ದುಪಡಿಸಲು ಪ್ರಕ್ರಿಯೆಯಲ್ಲಿರುತ್ತದೆ. | – | – |
| **3. ಮಕ್ಕಳ ಸಹಾಯವಾಣಿ** | | | | | | | |
| 1 | "ಪ್ರಚೋದನ (ಸೆಂಟರ್ ಫಾರ್ ಸೋಷಿಯಲ್ ಸರ್ವೀಸ್, ಗಡ್ಡೇನ ಹಳ್ಳಿ, ಜೆ.ಎಚ್ ಕೇರಿ ಅಂಚೆ, ವಿಜಯನಗರ ಬಡಾವಣೆ, ಬೇಲೂರು ರಸ್ತೆ, ಹಾಸನ. | – | ದಿನಾಂಕ: 12-09-2012 ರಿಂದ | – | ಸಂಕಷ್ಟದಲ್ಲಿ ಸಿಲುಕಿರುವ ಹಾಗೂ ರಕ್ಷಣೆ ಮತ್ತು ಪೋಷಣೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸಲು ಉಚಿತ ದೂರವಾಣಿ ಸಂಖ್ಯೆ: 1098ಕ್ಕೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ. ಈ ಸಂಖ್ಯೆಯು ಉಚಿತ ದೂರವಾಣಿಯಾಗಿದ್ದು ಮಕ್ಕಳಾಗಲಿ ಅಥವಾ ಸಾರ್ವಜನಿಕರಾಗಲಿ ಕರೆ ಮಾಡಬಹುದಾಗಿರುತ್ತದೆ. | ಈ ಕೇಂದ್ರಗಳು ಆರ್ಥಿಕ ಸೌಲಭ್ಯವನ್ನು ಚೈಲ್ಡ್ ಲೈನ್ ಇಂಡಿಯಾ ಫೌಂಡೇಷನ್ (Child Line India Foundation) ಚೆನ್ನೈ ವತಿಯಿಂದ ಪಡೆಯುತ್ತಿವೆ. | – |